**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 734/2017**

| | | |
|---|---|---|
| ಹೆಸರು | ಶ್ರೀ ಶಿವಕುಮಾರ | ಚಾಸಾಃ 3 |
| ತಂದೆ ಹೆಸರು | ಶ್ರೀ ಮಹದೇವಪ್ಪ | ಫ್ರಾಸಾಃ 4 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ದಿನಾಂಕಃ 01.04.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ವ್ಯವಸಾಯ | |
| ವಾಸ | ಕಮರಹಳ್ಳಿ ಗ್ರಾಮ<br>ಗುಂಡ್ಲುಪೇಟೆ ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಸಾಕ್ಷಿಯು ಮಹಜರನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರ್ತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಸಿ) ಎಂದು ಗುರ್ತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಿಪಿ-1 ಕ್ಕೆ ನಾನು ನಮ್ಮ ಊರಿನ ಸ್ಕೂಲ್ ಮನೆಯ ಹತ್ತಿರ ಹಾಕಿರುತ್ತೇನೆ. ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಈ ಬಗ್ಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿನಾಂಕಃ 03.04.2017 ರಂದು ಬಾಲಸುಬ್ರಹ್ಮಣ್ಣ ರವರು ನಮ್ಮ ಊರಿನಲ್ಲಿದ್ದು ಅವರು ನಮ್ಮನ್ನು ಬೇಗೂರು ಪೊಲೀಸ್ ಠಾಣೆಗೆ ಬರಮಾಡಿಕೊಂಡು

ಪ್ರಸನ್ನಕುಮಾರ್ ರಕ್ಷಿತ್, ಹರೀಶ್ ರವರು ಕಾರ್ ನಂ. ಕೆಎ 51 ಎಂಸಿ 9 ರಲ್ಲಿ ಬಂದು ಮನೆ ಮನೆಗೆ ತೆರಳಿ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಬೇಕು ಆಧಾರ್ ಕಾರ್ಡ್, ಓಟರ್ ಕಾರ್ಡ್ ಸಂಗ್ರಹಿಸಿ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸದಿದ್ದರೆ ನಿಮ್ಮ ಆಧಾರ್ ಕಾರ್ಡ್ ಹಾಗೂ ಓಟರ್ ಕಾರ್ಡ್ ನ್ನು ರದ್ದುಪಡಿಸುತ್ತೇವೆ ಎಂದು ಬೆದರಿಸಿದ್ದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಆರೋಪಿಗಳನ್ನು ಹಿಡಿದು ನಾಗರಾಜು ಮತ್ತು ರೇವಣ್ಣ ರವರು ಮೌಖಿಕವಾಗಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ಈ ಸಂಬಂಧ ಕಾರನ್ನು ವಶಪಡಿಸಿಕೊಳ್ಳಲು ಪಂಚರಾಗಿ ಸಹಕರಿಸುವಂತೆ ನನ್ನನ್ನು ಕೇಳಿಕೊಂಡಿದ್ದರು ಅದಕ್ಕೆ ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಪೊಲೀಸ್ ಠಾಣಾ ಆವರಣದಲ್ಲಿ ದಿಃ 03.04.2017 ರಂದು ನಂ. ಕೆಎ 51 ಎಂಸಿ 9 ರ ಕಾರನ್ನು ಪೊಲೀಸರು ಮಹಜರ್ ತಯಾರಿಸಿ ವಶಪಡಿಸಿಕೊಂಡರು, ನನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ರಾತ್ರಿ 8 ರಿಂದ 8.30 ರವರೆಗೆ ವಶಕ್ಕೆ ತೆಗೆದುಕೊಂಡರು ಎಂದರೆ ಸರಿಯಲ್ಲ. ಕಾರನ್ನು ಪರಿಶೀಲಿಸಿದಾಗ ಮೂರು ಬ್ಯಾಗುಗಳು ಇದ್ದವು ಎಂದರೆ ಸರಿಯಲ್ಲ. ಆರೋಪಿತರು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದು ಈ ಸಂಬಂಧ ಕಾರ ಮತ್ತು ಬ್ಯಾಗುಗಳನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ 1 ರ ವಿಚಾರ ತಿಳಿದು ಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ವಿಚಾವಾಗಿ ತನಿಖಾಧಿಕಾರಿಗಳಿಗೆ ದಿಃ 03.04.2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲ್ಕಂಡ ....................ಮಹಜರ್ ಗೆ ಸಹಿ ಹಾಕಿರುತ್ತೇನೆ ಎಂದು ಹೇಳಿಕೆಯ ಭಾಗವನ್ನು ಸಾಕ್ಷಿಗೆ ಸಂಪೂರ್ಣವಾಗಿ ಓದಿ ವಿವರಿಸಿದಾಗ ಸಾಕ್ಷಿ ನಿರಾಕರಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿಗಳು ಠಾಣೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಎ.ಎನ್.ಕಾಂತಮ್ಮ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**